## ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ಫೆರಿಟ್ ಒರ್ಹಾನ್ ಪಮುಕ್ ಸಂದರ್ಶನ

# ಕಾದಂಬರಿ ಏಕಾಂತ ಲೋಕಾಂತಗಳ ಸಂವಾದ

**ಇಂಗ್ಲಿಷ್ ಮೂಲ: ಏಂಜೆಲ್ ಗುರ್ರಿಯಾ-ಕ್ವಿಂಟಾನಾ**
**ಕನ್ನಡಕ್ಕೆ: ಹೇಮಾ ಎಸ್.**

ಟರ್ಕಿಯ ಲೇಖಕ ಫೆರಿಟ್ ಒರ್ಹಾನ್ ಪಮುಕ್ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಕಾದಂಬರಿಕಾರ. ಪಮುಕ್, 7 ಜೂನ್ 1952ರಲ್ಲಿ ಇಸ್ತಾಂಬುಲ್‌ನ ಶ್ರೀಮಂತ ಮನೆತನದಲ್ಲಿ ಹುಟ್ಟಿದ. ಇಸ್ತಾಂಬುಲ್‌ನ ರಾಬರ್ಟ್ ಕಾಲೇಜ್ ಸೆಕೆಂಡರಿ ಸ್ಕೂಲಿನಲ್ಲಿ ಓದಿ ಅನಂತರ ಇಸ್ತಾಂಬುಲ್‌ನ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆರ್ಕಿಟೆಕ್ಚರ್ ಓದಲು ಸೇರಿಕೊಂಡ. ಮೂರು ವರ್ಷಗಳ ಅನಂತರ ಓದನ್ನು ಬಿಟ್ಟು ಕಾದಂಬರಿ ಬರೆಯಲು ಶುರುಮಾಡಿದ. ಮೊದಲಿಗೆ ಚಿತ್ರಕಾರನಾಗಬೇಕೆಂದು ಕೊಂಡಿದ್ದ ಪಮುಕ್ ಬಳಿಕ ಹೊರಳಿದ್ದು ಬರವಣಿಗೆಯತ್ತ. ತನ್ನ 22ನೆಯ ವಯಸ್ಸಿನಿಂದಲೇ ಕಾದಂಬರಿಗಳನ್ನು ಬರೆಯಲು ಶುರುಮಾಡಿದ. 1973ರಲ್ಲಿ ಇಸ್ತಾಂಬುಲ್ ವಿವಿ ಇನ್‌ಸ್ಟ್ಯೂಟ್ ಆಫ್ ಜರ್ನಲಿಸಂನಿಂದ ಪತ್ರಿಕೋದ್ಯಮದಲ್ಲಿ ಪದವಿಯನ್ನು ಪಡೆದ.

ಸರಿಸುಮಾರು ನಾಲ್ಕು ದಶಕಗಳಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಪಮುಕ್‌ಗೆ 2006ರಲ್ಲಿ ನೊಬೆಲ್ ಪ್ರಶಸ್ತಿ ಸಂದಿದೆ. ಅವನ ಕಾದಂಬರಿಗಳು ಸುಮಾರು 63 ಭಾಷೆಗಳಿಗೆ ಅನುವಾದಗೊಂಡಿದ್ದು, ಅವುಗಳ ಒಂದು ಕೋಟಿ ಮೂವತ್ತು ಲಕ್ಷ ಪ್ರತಿಗಳು ಮಾರಾಟವಾಗಿವೆ.

ತನ್ನನ್ನು ತಾನು ಸಾಂಸ್ಕೃತಿಕ ಮುಸ್ಲಿಂ ಎಂದು ಕರೆದುಕೊಳ್ಳುವ ಪಮುಕ್, ತಾನು ದೇವರನ್ನು ನಂಬದಿದ್ದರೂ ತನಗೆ ಧರ್ಮದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಚಹರೆಯೊಡನೆ ಸಂಬಂಧವಿದೆ ಎಂದು ಹೇಳಿಕೊಳ್ಳುತ್ತಾನೆ. ಕುರ್ದಿಶ್ ಜನಾಂಗದವರ ಮೇಲಾದ ಹಲ್ಲೆ ಹಾಗೂ ಅವರ ಹಕ್ಕುಗಳ